ಕನಸು ಮಾರುವ ಮಾರಿ- ಎಸ್ ಜಿ ಸಿದ್ದರಾಮಯ್ಯ

ಇಂಗ್ಲಿಷ್ ಶಿಕ್ಷಣ ಕ್ರಮ ಮತ್ತು ಇಂಗ್ಲೀಷ್ ಮಾಧ್ಯಮ ಹಾಗೂ ಆರ್ ಟಿ ಇ ಕಾಯಿದೆ ಈ ಮುಂತಾದವುಗಳಿಂದ ಕನ್ನಡದಲ್ಲಿ ಓದುವ ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳ ಸ್ಥಿತಿ ಗತಿಯನ್ನು ಈ ಪದ್ಯ ವಿವರಿಸುತ್ತದೆ

ಹಲವಾರು ನೆಲದ ಒಡಲಿಂದ ಮೂಡಿಬಂದ ಹಾಗೂ ಹಳ್ಳಿಯ ಮುಗ್ಧ ಮಕ್ಕಳು ಕನ್ನಡ ಶಾಲೆಗೆ ಸೇರಿ, ಮೂಲ ಕನ್ನಡ ಮಾಧ್ಯಮದಲ್ಲಿಯೇ ಕಲಿತು ಬೆಳೆಯುತ್ತಿದ್ದ ಮಕ್ಕಳಿಗೆ ಜ್ಞಾನವನ್ನು ಬಿತ್ತಿ, ಅವರನ್ನು ಸುಶಿಕ್ಷಿತರನ್ನಾಗಿಸುತ್ತಿದ್ದ ಕನ್ನಡ ಶಾಲೆಯು ಇಂದು ಇಂಗ್ಲೀಷಿನ ಕಾರಣವಾಗಿ ಆರಕ್ಕೆ ಏರದ ಮೂರಕ್ಕೆ ಇಳಿಯದೆ ಹೆಸರಿಲ್ಲದೆ ಕೊನೆಗೆ ಕನ್ನಡ ಶಾಲೆಯು ಕೂಡ ಕಡಿಮೆಯಾಗುತ್ತಾ ಸೊರಗುತ್ತ ಇಂದು ಹೆಸರಿಗೆ ಮಾತ್ರ ಕನ್ನಡ ಮಾಧ್ಯಮ ಶಾಲೆಯಾಗಿ ಉಳಿದುಕೊಂಡಿದೆ.

ಮಕ್ಕಳ ಶಿಕ್ಷಣ ಹಕ್ಕಿನ ಕಾಯ್ದೆ ಎಂಬ RTE ಗಿಡುಗನಂತೆ ಹಾರುತ್ತಾ ಬಂದು ಕೂಲಿ ಕುಂಬಳಿಯವರ ಕನಸಿಗೆ ರೆಕ್ಕೆಯನ್ನು ಕಟ್ಟಿತು. ತಮ್ಮ ಮಕ್ಕಳು ಇಂಗ್ಲಿಷ್ ವಿದ್ಯಾಭ್ಯಾಸದ ಮೂಲಕ ಮತ್ತಷ್ಟು ಬುದ್ಧಿವಂತರಾಗುತ್ತಾರೆ ಎಂಬ ಕನಸನ್ನು ನನಸು ಮಾಡಲು ಆಂಗ್ಲ ಮಾಧ್ಯಮದ ಕಡೆಗೆ ಹೊರಟರು ತದನಂತರ ಮಕ್ಕಳು ಸೂಟು ಬೂಟು ತೊಟ್ಟು ಮಮ್ಮಿ ಡ್ಯಾಡಿ ಗುಡ್ ಮಾರ್ನಿಂಗ್ ಗುಡ್ ಇವಿನಿಂಗ್ ಮುಂತಾದ ಪಂಜರ ಗಿಳಿಗಳ ರೀತಿಯಲ್ಲಿ ಕಂಠಪಾಠ ಮಾಡುತ್ತಾ ಅದನ್ನೇ ಹೊರಡಿಸುತ್ತಾ ಹಳ್ಳಿಯ ಮಕ್ಕಳು ಕೂಡ ಹೀಗೆ ಇಂಗ್ಲೀಷನ್ನು ಕಲಿತವು ಇಂಗ್ಲಿಷ್ ಮಾಧ್ಯಮದ ಶಾಲೆಗೆ ಒಮ್ನಿ ಮುಂತಾದ ಸಾರಿಗೆ ಮುಖಾಂತರ ಕುರಿಗಳ ರೀತಿಯಲ್ಲಿ ತುಂಬಿಕೊಂಡು, ಸಮವಸ್ತ್ರವನ್ನು ತೊಟ್ಟ ಮುಗ್ಧ ಮಕ್ಕಳು ತಮ್ಮ ತಂದೆ ತಾಯಿಗಳಿಗೆ ಗುಡ್ ಬಾಯ್,ಟಾಟಾ ಮುಂತಾದ ಇಂಗ್ಲಿಷ್ ಪದಗಳ ಕಲಿತು ಕನ್ನಡ ಬಡ ಶಾಲೆಗಳನ್ನು ಮುಚ್ಚಿದವು. ಈ ಕಾನ್ವೆಂಟ್ ಶಾಲೆಗಳಿಗೆ ಸೇರಿದ ವಿದ್ಯಾರ್ಥಿಗಳನ್ನು ಉಳಿದು ಅಸಹಾಯಕರಾದವರು ರ್ಟಿಇ ಮೂಲಕ ಶಿಕ್ಷಣ ಪಡೆಯಲಾರದವರು ಕುರುಡರು ಕುಂಟರು ಬಾಯಿ ಇಲ್ಲದ ಮಕ್ಕಳು ಹೀಗೆ ಅವಕಾಶ ವಂಚಿತರಾಗಿ ಮಾತನಾಡದ ಸ್ಥಿತಿಗೆ ತಲುಪಿ ಸೂತಪುತ್ರದಂತೆ ಜೀತಕ್ಕೆ ನಡೆದರು ಮತ್ತೆ ಅವರಿಗೆ ವಾರಿಯಬಂಡೆಗೆ ಇಟ್ಟಿಗೆ ಮಾಡುವ ಸುಟ್ಟುವುದು ಉರಿಯುವ ಗೂಡಿಗೆ ಕೆಲಸಕ್ಕೆ ಸೇರುವ ಅವಕಾಶ ಬಂತು ಹೀಗೆ ಕಾನ್ವೆಂಟ್ ಶಿಕ್ಷಣ ಬಡವರನ್ನು ಮತ್ತಷ್ಟು ಬಹಳ ಸ್ಥಿತಿಗೆ ತಳ್ಳಿ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚಿ ಇಂಗ್ಲಿಷ್ ಶಿಕ್ಷಣಕ್ಕೆ ಮಣೆ ಹಾಕಿತು.

ಹೀಗೆ ಇಂಗ್ಲಿಷ್ ಶಾಲೆಗೆ ಸೇರಿದ ಮಕ್ಕಳು ನಲಿ ಕಲಿ ಹಾಡಿನ ತುತ್ತೂರಿಯನ್ನು ಮರೆತರು, ಒಂದು ಎರಡು ಬಾಳೆಲೆ ಹರಡು…ಹೀಗೆ ಕನ್ನಡ ಪದ್ಯಗಳನ್ನು, ಹುಯ್ಯೋ ಹುಯ್ಯೋ ಮಳೆರಾಯ ಇಂತಹ ಜನಪದ ವೈಚಾರಿಕ ನಿಲುವನ್ನು ಹೊಂದಿದಂತಹ ಹಾಡುಗಳನ್ನು ಮರೆತು ಇಂದು rain rain go away ಮುಂತಾದ ಅರ್ಥವಾಗದ ಇಂಗ್ಲಿಷಿನ ಹಾಡುಗಳನ್ನು ಹಾಡುತ್ತಾ ಇಂಗ್ಲಿಷ್ ನಲ್ಲಿ ಬಬ ಮಗ್ಗಿಗಳನ್ನು ಹೇಳದೆ ಒದ್ದಾಡುತ್ತಾ ಬದುಕುತ್ತಿದ್ದಾರೆ. ಸಮಾನತೆ ಬಿತ್ತುವ ಸರ್ವಜನಾಂಗದ ಶಾಂತಿಯ ತೋಟ ಹೀಗೆ ಹಾಡುವುದನ್ನೇ, ಪಾಲಿಸುವುದನ್ನೇ ಮರೆತದ್ದಲ್ಲದೆ ನಮ್ಮ ಪರಂಪರೆ, ಇತಿಹಾಸವನ್ನು ಮರೆತು ಪಾಶ್ಚಿಮಾತ್ಯ ಸಂಸ್ಕೃತಿಗೆ ಬಲಿಯಾಗುತ್ತಿದ್ದಾರೆ.

ಕನ್ನಡದಲ್ಲಿ ಅತ್ತರೆ ಹತ್ತು ರೂ, ತೂಕಡಿಸಿದರೆ ಐವತ್ತು ರೂ. ಮರೆತು ನಿದ್ರಿಸಿದರೆ ನೂರು ರೂ. ಹೀಗೆ ಬಲವಂತವಾಗಿ ಕನ್ನಡವನ್ನು ಮರೆಸುವ ಈ ದಂಡ ತೆರುವಂತೆ ಮಾಡುವ ಕಲೆಯಿಂದ ಅತಂತ್ರ ಭಾಷಾದ್ವಂದ್ವದಲ್ಲಿ ಬಿದ್ದ ಮಕ್ಕಳ ಜ್ಞಾನವು ಅರೆಬರೆಯಾಗಿ ಅವರು ಯಾವುದೇ ವಿಷಯದಲ್ಲೂ ಪರಿಪೂರ್ಣರಾಗದೆ ಇವರ ಪೀಳಿಗೆಯೂ ಹೀಗೆ ಮುಂದುವರಿದರೆ ಬದುಕು ಸಾಮರಸ್ಯವಿಲ್ಲದಂತಾಗಿದೆ.

ಹೀಗೆ ಆಂಗ್ಲ ಭಾಷೆಯು, ಆಂಗ್ಲ ಶಿಕ್ಷಣ ಮಾಧ್ಯಮವು ಊರಿಗೆ ಮಾರಿ ಬಂದಂತೆ ಬಂದು ಮಕ್ಕಳ ಪಾಲಿಗೆ ಉರಿಮಾರಿಯಾಗಿ, ಮಕ್ಕಳ ಊಟಕ್ಕೆ ವಿಷವನ್ನು ಹಾಕಿ ಅವರ ನೆಮ್ಮದಿಯ, ಮುಗ್ಧ ಬದುಕನ್ನು ಕಸಿದುಕೊಂಡಿದೆ. ಒಂದೆಡೆ ಕನ್ನಡ ಶಾಲೆ ಮುಚ್ಚಿದರೆ ಇನ್ನೊಂದೆಡೆ ಆಂಗ್ಲ ಮಾಧ್ಯಮದಲ್ಲಿ ಕಲಿತ ಮಕ್ಕಳು ಪರಿಪೂರ್ಣರಾಗದೆ ತೊಳಲಾಡುತ್ತಿದ್ದಾರೆ.

ಭುವನೇಶ್ವರಿ.ಜಿ

ಕೆ.ಎಲ್.ಇ ಎಸ್ ನಿಜಲಿಂಗಪ್ಪ ಕಾಲೇಜು